ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೬೮೫ (೨೩೨೯)

ಸದಸ್ಯರ ಹೆಸರು ಶ್ರೀ ರಾಜೇಂದ್ರ ವರ್ಮ (ಹಲಸೂರು)

ಉತ್ತರಿಸುವ ಸಚಿವರು ಶ್ರೀ ಡಾ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು)

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ)	ಬೀದರ್ ನಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜನ್ನು ಸ್ಥಾಪಿಸುವ ಕಾರ್ಯ ಯಾವ ಹಂತದಲ್ಲಿದೆ ?	೧) ಪ್ರಥಮ ವರ್ಷಕ್ಕೆ ಬೇಕಾಗುವ ಕಟ್ಟಡ ಕಾಮಗಾರಿ ಹಾಗೂ ವಿದ್ಯಾರ್ಥಿ ನಿಲಯ ಕಟ್ಟಡಗಳು ಕೊನೆಯ ಹಂತದಲ್ಲಿದ್ದು ಸಧ್ಯದಲ್ಲಿಯೇ ಪೂರ್ಣಗೊಳ್ಳಲಿವೆ ೨) ಪ್ರಥಮ ವರ್ಷಕ್ಕೆ ಅವಶ್ಯವಿರುವ ಪೀರೋಪಕರಣ ಹಗೂ ಇತರೆ ಉಪಕರಣಗಳನ್ನು ಖರೀದಿಸಲಾಗಿದ್ದು, ಇನ್ನುಳಿದ ಯಂತ್ರೋಪಕರಣಗಳಿಗೆ ಕಾರ್ಯಾದೇಶ ನೀಡಲಾಗಿದೆ ೩) ಭಾರತೀಯ ವೈದ್ಯಕೀಯ ಪರಿಷತ್ನವದೆಹಲಿ ಇವರಿಗೆ ಅನುಪಾಲನಾ ವರದಿ ಸಲಲಿಸಲಾಗಿದ್ದು, ಮುಂದಿನ ವೀಕ್ಷಣೆ ದಿನಾಂಕವನ್ನು ನಿರೀಕ್ಷಿಸಲಾಗಿದೆ
ಆ)	ಇದಕ್ಕಗಿ ಈವರೆವಿಗೆ ಯಾವ ಯಾವ ಬಾಬ್ತುಗಳಿಗೆ ಎಷ್ಟೆಷ್ಟು ಹಣವನ್ನು ವೆಚ್ಚ ಮಾಡಲಾಗಿದೆ (ಪೂರ್ಣ ವಿವರಗಳನ್ನು ಒದಗಿಸುವುದು)?	ಒಟ್ಟು ಮಂಜೂರಾದ ಅನುದಾನ ರೂ ೨೧ ೭೧ ಕೋಟಿ ಒಟ್ಟು ಖರ್ಚಾದ ಅನುದಾನ ರೂ ೧೭ ೧೮ ಕೋಟಿ (ಪ್ರತ್ಯೆಕ ವಿವರವುಳ್ಳ ಮಾಹಿತಿಯನ್ನು ಲಗತ್ತಿಸಿದೆ)
ಇ)	ಈ ವೈದ್ಯಕೀಯ ಕಾಲೇಜಿಗೆ ಈ ವರೆವಿಗೆ ಯವ ಯವ	**ಅ ಬೋಧಕ ಸಿಬ್ಬಂದಿ (ಪ್ರತಿ ಹುದ್ದೆಗೆ)**

	ಹುದ್ದೆಗಿಗೆ ಎಷ್ಟೆಷ್ಟು ಜನರನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ (ಹುದ್ದೆವಾರು ವಿವರಗಳನ್ನು ಒದಗಿಸುವುದು ಹಾಗೂ ಇವರುಗಳಿಗೆ ಪಾವತಿಸುತ್ತಿರುವ ವೇತನವೆಷ್ಟು)?	೧) ಪ್ರಧ್ಯಾಪಕರು ೦ ೧೪ ರೂ ೩೮,೦೦೦/- ೨) ಅಸೋಸಿಯೇಟ್ ಪ್ರಾಧ್ಯಾಪಕರು – ೦೫ ರೂ ೨೫,೦೦೦/- ೩) ಸಹಾಯಕ ಪ್ರಾಧ್ಯಾಪಕರು – ೧೭ ರೂ ೨೫,೦೦೦/- ೪) ಟ್ಯೂಟರ್ / ಜ್ಯೂನಿಯರ್ ರೆಸಿಡೆಂಟ್ – ೧೭ ೫) ಸೀನಿಯರ್ ರೆಸಿಡೆಂಟ್ – ೧೪ ರೂ ೧೦,೫೦೦೦/- **ಆ ಬೋಧಕೇತರ ಸಿಬ್ಬಂದಿಗಳು (ಪ್ರತಿ ಹುದ್ದೆಗೆ)** ೧) ಆಡಳಿತಾಧಿಕಾರಿ – ೦೧ – ೨) ಗ್ರಂಥಪಾಲಕರು – ೦೧ ರೂ ೧೦,೦೦೦/- ೩) ವೈದ್ಯಕೀಯ ದಾಖಲೆಗಳ ತಂತ್ರಜ್ಞರು – ೦೩ ರೂ ೩,೦೦೦/-
		೪) ಗಣಕಯಂತ್ರ ನಿರ್ವಾಹಕರು – ೦೨ ರೂ ೩,೦೦೦/- ಮೇಲೆ ಹೇಳಲಾದ ಸಿಬ್ಬಂದಿಯನ್ನು ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ (ಭಾರತೀಯ ವೈದ್ಯಕೀಯ ಪರಿಷತ್ತು ಪರಿವೀಕ್ಷಣೆ ಅವಶ್ಯವಿರುವುದರಿಂದ) ನೇಮಕಾತಿ ಮಾಡಿ ಕೊಳ್ಳಲಾಗಿದೆ ೧) ಪ್ರಥಮ ದರ್ಜೆ ಸಹಾಯಕರು

		– ೦೨ ರೂ ೭,೨೦೪/– ೨) ಎಂ ಎಸ್ ಡಬ್ಲ್ಯೂ – ೦೧ ರೂ ೭,೨೦೪/– ಇಲ್ಲಿಯವರೆಗೆ ರೂ ೧ ೫೪ ಕ್ಕೋಟಿ ವೇತನ ಪಾವತಿಸಲಾಗಿದೆ
ಈ)	ಇವರುಗಳನ್ನು ನೇಮಕಾತಿ ಮಾಡಿಕೊಳ್ಳುವಾಗ ನಿಯಮಾನುಸಾರ ಸಂದರ್ಶನ ಕರೆಯಲಾಗಿದೆಯೇ, ಮೀಸಲಾತಿ ನಿಯಮಗಳನ್ನು ಪಾಲಿಸಲಾಗಿದೆಯೇ ಹಘೂ ಮೆರಿಟ್ ಆಧಾರವನ್ನು ಅನುಸರಿಸಲಾಗಿದೆಯೇ?	ಸರ್ಕಾರದ ನಿಯಮಾನುಸಾರ ಸಂದರ್ಶನ ಕರೆದು ಮೀಸಲಾತಿ ಹಾಗೂ ಮೆರಿಟ್ ಪ್ರಕಾರ ನೇಮಿಸಲಾಗಿದೆ ಲಭ್ಯವಿರುವ ಅಭ್ಯರ್ಥಿಗಳಿಗೆ ಮೀಸಲಾತಿ ಅಳವಡಿಸಿದ್ದು, ಹಾಗೂ ಅತಿ ದುರ್ಲಭ್ಯವಿರುವ ವಿಭಾಗಗಳಿಗೆ (ಉದಾ – ಅನಾಟಮಿ, ಫಿಜಿಯೋಲಜಿ, ಬಯೋಕೆಮಿಸ್ಟ್ರಿ) ಬೋಧಕ ಸಿಬ್ಬಂಧಿಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲಾಗಿದೆ ಸಂದರ್ಭಕ್ಕನುಗುಣವಾಗಿ ಮೀಸಲಾತಿಯನ್ನು ಅಳವಡಿಸಿಕೊಳ್ಳಲು ಅವಕಾಶ ಕಲ್ಪಸಿಕೊಳ್ಳಲಾಗಿದೆ
ಉ)	ಈ ಪೈಕಿ ಎಷ್ಟು ನೇಮಕಾತಿಗಳು ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಳಾಗಿವೆ ಮತ್ತು ಯವ ಯಾವ ಹುದ್ದೆಗಳನ್ನು ಖಾಯಂಗೊಳಿಸಲಾಗಿದೆ?	ಒಟ್ಟು ೩೭ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿ ಉಳಿದ ಹುದ್ದೆಗಳಾದ ಪ್ರಧ್ಯಾಪಕರು, ಅಸೋಸಿಯೇಟ್ ಪ್ರಫೆಸರ್, ಸಹಾಯಕ ಪ್ರಾಧ್ಯಾಪಕರು, ಪ್ರಥಮ ದರ್ಜೆ ಸಹಾಯಕ ಹಗೂ ಎಂ ಎಸ್ ಡಬ್ಲ್ಯೂ ಹುದ್ದೆಗಳನ್ನು ಖಾಯಂಗೊಳಿಸಲಾಗಿದೆ